THE KARNATAKA STATE CIVIL SERVICES REGULATION OF PROMOTION PAY AND PENSION (AMENDNENT) BILL, 1981

Motion to Consider

SRI Y. RAMAKRISHNA (Minister for Law and parliament Affairs) Sir on behalf of the Chief Minister I beg to move.

That the Karnataka State Civil Services (Regulation of Promotion, pay and pension (Amendment) Bill, 1981 be taken into consideration.

The question was proposed

ಶ್ರೀ ವೈ. ರಾಮಕೃಷ್ಣ.– ಸನ್ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ತಂದಿರತಕ್ಕ ಉದ್ದೇಶ ಏನೆಂದರೆ, ೧೯೫೬ನೇ ಇಸವಿ ನವೆಂಬರ್ ೧ನೇ ತಾರೀಖು ಕರ್ನಾಟಕ ಉದಯವಾಯಿತು. ಕರ್ನಾಟಕ ಆದಾಗ ಬಾಂಬೆ ಕರ್ನಾಟಕದವರು, ಮದ್ರಾಸ್ ಕರ್ನಾಟಕದವರು ಹಾಗೂ ಎಲ್ಲರೂ ಕೂಡ ಸೇರಿದರು. ಅಲ್ಲಿ ಕೆಲಸ ಮಾಡುತ್ತಿದ್ದ ಸರ್ಕಾರಿ ನೌಕರರು ಆ ದಿನದಿಂದ ಕರ್ನಾಟಕ ರಾಜ್ಯದ ನೌಕರರು ಎಂದು ಪರಿಗಣಿಸಲ್ಪಟ್ಟರು. ಆ ಸಂದರ್ಭದಲ್ಲಿ ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಯಲು ಅವರನ್ನು ಬರ ಮಾಡಿಕೊಂಡು ಅಯಾ ಡಿಪಾರ್ಟ್‌ಮೆಂಟ್‌ಗಳಲ್ಲಿ ಅವರುಗಳಿಗೆ ಕೊಡಬೇಕಾದಂಥ ಸಂಬಳ, ವೇತನ ಮತ್ತು ಪ್ರಮೋಷನ್, ಬಡ್ತಿ ಮತ್ತು ಅವರ ಪೆನ್‌ಷನ್, ಇವುಗಳನ್ನು ನಿರ್ಧರಿಸ ಬೇಕಾದಂಥ ಕಾಲ ಬಂತು. ಈ ರೀತಿ ಆದಿನಿಂದ ನಿರ್ಧಾರ ಆಗಬೇಕಾದರೆ ಮೊಟ್ಟ ಮೊದಲಿಗೆ ಪ್ರೊವಿಜನಲ್ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಬೇಕಾಯಿತು, ನಮ್ಮ ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಪ್ರಕಾರ. ಆ ಪ್ರೊವಿಜನಲ್ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡಿದೆ. ಅದರ ಹೆಸರೇ ಪ್ರೊವಿಜನಲ್. ಇದನ್ನು ಭಾರತ ಸರ್ಕಾರಕ್ಕೆ ಕಳಿಸಿ ಒಪ್ಪಿಗೆ ಪಡೆದು ಅಲ್ಲಿ ತಿದ್ದುಪಡಿ ಪಡೆದ ನಂತರ ಫೈನಲ್ ಸೀನಿಯಾರಿಟಿ ಲಿಸ್ಟ್ ಆಯಿತು. ಈ ರೀತಿ ಪ್ರೊವಿಜನಲ್ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ನಾವು ತಯಾರುಮಾಡಿ ಭಾರತ ಸರ್ಕಾರಕ್ಕೆ ಕಳಿಸಿ ಕೊಟ್ಟಾಗ ಕೆಲವರು ಬದಲಾವಣೆಗಳೊಂದಿಗೆ ಈ ಲಿಸ್ಟ್ ಪ್ರಕಟವಾಯಿತು. ಈ ರೀತಿ ಬದಲಾವಣೆ ಯಾಗಿ ಪ್ರಕಟಿವಾದ ಪಟ್ಟಿಯಲ್ಲಿ ಕೆಲವು ಅಧಿಕಾರಿಗಳು ಪ್ರೊವಿಜನಲ್ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್‌ನಲ್ಲಿ ಯಾವ ಬಡ್ತಿಯನ್ನು ಪಡೆದಿದ್ದರೋ ಅವರು ಅದನ್ನು ಕಳೆದುಕೊಂಡರು ಮತ್ತು ಯಾರಿಗೆ ಬಡ್ತಿ ದೊರಕಿರಲಿಲ್ಲವೋ ಅವರಿಗೆ ಸಿಕ್ಕಿತು. ಈ ಬದಲಾವಣೆಯಾದ ಪ್ರಯುಕ್ತ ಯಾವ ಅಧಿಕಾರಿಗಳು ಆ ಒಂದು ಬಡ್ತಿ ಪಡೆದು ತಮ್ಮ ಸ್ಥಾನದಲ್ಲಿ ಈಗಾಗಲೇ ಆಕ್ಟ್ ಮಾಡಿದ್ದರು ಅಂಥವರು ಬಡ್ತಿಯನ್ನು ಕಳೆದುಕೊಳ್ಳುವುದು ಅಷ್ಟೇ ಅಲ್ಲ ಸಂಬಳ ಡ್ರಾ ಮಾಡಿಬಿಟ್ಟಿದ್ದಾರೆ. ಯಾತಕ್ಕೋಸ್ಕರ ಡ್ರಾ ಮಾಡಿದ್ದಾರೆ ಅಂದರೆ ಈಗೊಗಲೇ ಅವರು ಆ ಜಾಗದಲ್ಲಿ ಆಕ್ಟ್ ಮಾಡಿದ್ದಾರೆ. ಈಗ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪ್ರಕಟವಾದ ಮೇಲೆ ಆ ಸ್ಥಾನದಲ್ಲಿ ಕೆಲಸಮಾಡಿ ಪಡೆದಂಥ ವೇತನ ಮತ್ತು ಅವರು ಪಡೆಯ ಬೇಕಾದಂಥ ವೇತನದ ಅಂತರವನ್ನು ವಾಪಸ್ ತೆಗೆದುಕೊಳ್ಳುವುದು ಅಷ್ಟು ಸೂಕ್ತವಲ್ಲ. ಏಕೆಂದರೆ, ಅವರು ಈಗಾಗಲೇ ಆ ಸ್ಥಾನದಲ್ಲಿ ಕೆಲಸಮಾಡಿರುವ ದೆಸೆಯಿಂದ ಅದನ್ನು ಪ್ರೆಸ್ ಮಾಡಬಾರದು ಎಂದು ಈ ತಿದ್ದುಪಡಿಯನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ಎರಡನೆಯದು ಒಂದು ಡ್ರಾಫ್ಟಿಂಗ್ ಎರರ್ ಇತ್ತು, ಅದನ್ನು ಈಗಾಗಲೇ ಮೂರನೇಯದರಲ್ಲಿ ಹೇಳಿದ್ದೇನೆ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದೇನೆ. ಅದು ಈ ಒಂದು ಪರೀಕ್ಷೆಗೆ ಸಂಬಂಧಪಟ್ಟಿದ್ದು It is purely a clerical error ಈ ಕಾನೂನನ್ನು ೧೧ನೇ ಏಪ್ರಿಲ್ ೧೯೭೪ರಲ್ಲಿ ಮಾಡಿದ್ದರೂ ಕೂಡ ಇದನ್ನು ೧–೧೧–೧೯೫೬ ಎಂದು ರೆಕ್ಟಿಫೈ ಮಾಡುವುದಕ್ಕೆ ಸಭೆಯ ಅನುಮತಿಯನ್ನು ಕೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಸಭಾಧ್ಯಕ್ಷರೆ. ಇದರಲ್ಲಿ ಮೂರನೇ ತಿದ್ದುಪಡಿಯನ್ನು ತಂದಿದ್ದಾರೆ, ಅದು ಕ್ಲರಿಕಲ್ ಎರರ್, ಅದರ ಬಗ್ಗೆ ನಮ್ಮ ವಾದ ಇಲ್ಲ. ಆದರೆ ಇನ್ನು ಎರಡು ಉದ್ದೇಶಗಳಿವೆ, ಅದು ಸದುದ್ದೇಶದಿಂದ ಕೂಡಿಲ್ಲ ಎನ್ನುವುದು ನನ್ನ ಭಾವನೆ. ಏಕೆಂದರೆ

ತಮಗೆ ಗೊತ್ತಿರಬಹುದು, ಭಾಷಾವಾರು ಪ್ರಾಂತ್ಯ ರಚನೆಯಾದಾಗ ಯಾರನ್ನು ಈ ರಾಜ್ಯಕ್ಕೆ ಬರುತ್ತೀರಿ, ಆಧಿಕಾರ ವಹಿಸಿಕೊಳ್ಳುತ್ತೀರಿ ಎಂದು ಹೇಳತಕ್ಕ ಸಂದರ್ಭ ಬಂದಾಗ, ಸೀನಿಯಾರಿಟಿ ಲಿಸ್ಟ್ ಮಾಡಿದಂಥ ಕಾಲದಲ್ಲಿ ಆದಂಥ ದೋಷಗಳಿಂದ ಎಷ್ಟು ಅಘಾತ ಮಾಡಿದೆವು ಎನ್ನುವುದಕ್ಕೆ ಅನೇಕ ನ್ಯಾಯಾಲಯಗಳಿಂದ ಬಂದಂಥ ತೀರ್ಪುಗಳಿಂದ ವ್ಯಕ್ತವಾಗಿಂತ್ತದೆ. ಹೈದರಾಬಾದ್ ಸರ್ವೀಸ್‌ನಿಂದ ಬಂದಿರತಕ್ಕವರಲ್ಲಿ ಬಹಳಷ್ಟು ಜನರನ್ನು ಜೂನಿಯರ್ ಇಂಜಿನಿಯರ್ ಆಗಿದ್ದವರನ್ನು ಏಕ್ಸಿಕ್ಯೂಟೀವ್ ಇಂಜಿನಿಯರ್ ಎಂದು ಸೀನಿಯಾರಿಟಿ ಲಿಸ್ಟ್‌ಗೆ ಸೇರಿಸಿ ಕಳಿಸಿದ್ದರಿಂದ ನಮ್ಮಲ್ಲಿ ಅವರಿಗಿಂತ ೧೦–೧೫ ವರ್ಷ ಹೆಚ್ಚು ಸೇವೆ ಮಾಡಿದಂಥ ಅಧಿಕಾರಿಗಳ ಮೇಲೆ ಸೂಪರಿಂಟೆಂಡಿಂಗ್ ಇಂಜನಿಯರ್ ಆಗಿ ಚೀಫ್ ಇಂಜನಿಯರ್ ಆಗಿ ಬಂದಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ.

೧೦–೧೫ ವರ್ಷಗಳ ಕಾಲ ಕೆಲಸ ಮಾಡಿದಂಥ ಸಮರ್ಥ ಅಧಿಕಾರಿಗಳನ್ನು ತುಳಿಯಲ್ಪಟ್ಟಿರತಕ್ಕ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಅವರಿಗೆ ಆರ್ಥಿಕವಾಗಿ ಮತ್ತೆ ವ್ಯವಹಾರಿಕವಾಗಿ ಎಲ್ಲಾ ದೃಷ್ಟಿಯಿಂದ ಆಘಾತವಾಗಿರತಕ್ಕ ಪರಿಸ್ಥಿತಿಯನ್ನು ಅನುಭವಿಸಿದ್ದಾರೆ. ಅನೇಕರು ನ್ಯಾಯಾಲಯಕ್ಕೆ ಹೋದರು ಉತ್ತಮವಾದಂಥ ಪರಿಸ್ಥಿತಿ ಸಿಗಲಿಲ್ಲ ಹಾಗೂ ಅದರಿಂದ ಬಹಳಷ್ಟು ಕಷ್ಟವನ್ನು ಅನುಭವಿಸಿದ್ದಾರೆ. ಸಾಮಾನ್ಯವಾಗಿ ಅಧ್ಯಾಪಕರುಗಳು ಹೈಸ್ಕೂಲ್‌ನಲ್ಲಿರತಕ್ಕವರು, ಪ್ರೈವೇಟ್ ಸ್ಕೂಲ್‌ನಲ್ಲಿರತಕ್ಕ ಅಧ್ಯಾಪಕರುಗಳು ಸಾಕಷ್ಟು ಕಷ್ಟವನ್ನು ಅನುಭವಿಸಿದ್ದಾರೆ. ಅಂದಿನ ಮೈಸೂರಿನಲ್ಲಿದ್ದಂಥ ಬಹಳಷ್ಟು ಜನ ಕೆಳಕ್ಕೆ ಹೋಗಬೇಕಾದಂಥ ಪರಿಸ್ಥಿತಿ ಬಂದು ಅವರಿಗಿಂತ ಜೂನಿಯರ್ ಆಗಿರತಕ್ಕಂಥವರು ಮೇಲಕ್ಕೆ ಹೋದುಂಥ ಪರಿಸ್ಥಿತಿ ಬಂದಿದ್ದನ್ನು ನಾವು ನೋಡಿದ್ದೇವೆ. ಇದನ್ನು ನಾವು ಅನೇಕ ಸಾರಿ ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಿದರೂ ಕೂಡ ಈ ಕ್ವಾಲಿಟಿ ತರುವುದಕ್ಕೆ ಸಾಧ್ಯವಾಗಲಿಲ್ಲ. ಯಾರು ಅಧಿಕಾರವನ್ನು ಪಡೆದುಕೊಂಡು ಹೆಚ್ಚಿನ ಮೌಲ್ಯಗಳನ್ನು ಪಡೆದುಕೊಂಡು, ಯಾರು ತಿಂದು ಹೋಗಿದ್ದಾರೋ ಅವರು ತಿಂದು ಹೋಗಲಿ ಎಂದು ಅವಕಾಶ ಮಾಡಿಕೊಡುವುದಕ್ಕೆ ಇದನ್ನು ತಂದಿದ್ದೀರಿ. In Section 4 of this bill it is said.....his pay on the date of eligibility shall be refixed as if he had been promoted on such date, but he shall not be liable to refund the excess pay and allowances drawn by him up to the date of issue of the order fixing the date of eligibility,

SRI Y. RAMAKRISHNA.—He has already acted in that post and we have taken work from him. This bill has been brought just to over come the objection raised by the A.G.

SRI H. GANGADHARAN.—This bill may be to overcome the A.G.s objection. But the point here is have you given the opportunity to the persons who are going to lose the benfits.? How are you going to fill it up? ಈಗ ಅವನಿಗೆ ಏನು ಮಾಡಿದ್ದೀರಿ, ನೀವು ಮಾಡಿದ ದುರಾಡಳಿತ ಕಾರಣದಿಂದ, ಯಾರಿಗೆ ಅಧಿಕಾರ ಸಿಕ್ಕಬೇಕಾಗಿತ್ತೋ ಅವರಿಗೆ ಸಿಗಲಿಲ್ಲ, ಯಾರಿಗೆ ಸಿಗಬಾರದಾಗಿತ್ತೋ ಅವರಿಗೆ ಸಿಕ್ಕಿತು ಆದುದರಿಂದ ಅವರು ಯಾರಿಗೆ ಲಭ್ಯವಾಗಿತ್ತೋ ಅವರು ಹಣವನ್ನು ತಿಂದು ಕೊಂಡು ಹೋಗಲಿ, ವಸೂಲಿ ಮಾಡುವುದು ಬೇಡವೆಂದು ಹೇಳುತ್ತಿದ್ದೀರಿ. ಆದೇ ಇವತ್ತು ನ್ಯಾಯವಾಗಿ ಯಾವ ಅಧಿಕಾರಿಗೆ ಬಿಡ್ತಿ ಸಿಕ್ಕಬೇಕಾಗಿತ್ತೋ ಆ ಅಧಿಕಾರಿಗೆ ಪ್ರಮೋಷನ್ ಸಿಕ್ಕಿಲ್ಲ ಅವನಿಗೆ ಆದ ಅನ್ಯಾಯವನ್ನು ಲಾಸನ್ನು ತುಂಬಿಸಿ ಕೊಡತಕ್ಕ ಕಾರ್ಯಕ್ರಮವನ್ನು ಮಾಡಿಕೊಡುವುದಕ್ಕೆ ತಯಾರಾಗಿದ್ದೀರಾ ಮತ್ತೆ ಯಾವ ಯಾವ ಇಲಾಖೆಯೊಳಗೆ ಎಷ್ಟೆಷ್ಟು ಅಧಿಕಾರಿಗಳು ಈ ಒಂದು ವರದಿಯೊಳಗೆ ಬರುತ್ತಾರೆಂಬುದರ ಬಗ್ಗೆ ಹೇಳಿಲ್ಲ. ಇವರಿಂದ ಎಷ್ಟು ಜನ ಅಧಿಕಾರಿಗಳಿಗೆ ಪ್ರಮೋಷನ್ ಸಿಗುತ್ತದೆ ಎಷ್ಟು ಜನರಿಗೆ ಡಿಮೋಷನ್ ಆಗುತ್ತದೆ ಎನ್ನುವುದರ ಬಗ್ಗೆ ಲೆಕ್ಕವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಇದರಿಂದ ನಮ್ಮ ರಾಜ್ಯದ ಬಜೆಟ್ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ. ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ಹಣ ಅಧಿಕವಾಗಿ ಖರ್ಚು ಆಗುತ್ತದೆ ಎಂಬುದು ಗೊತ್ತಾಗುತ್ತಿತ್ತು. ಪೆನಾನಿಯಲ್ ಮೆಮೊರ್ಯಾಂಡಂ ಇದರಲ್ಲಿ ಇಲ್ಲದೇ ಇರುವುದರಿಂದ ಈ ಬಿಲ್ ಇಂಟರ್‌ಡ್ಯೂಜ್ ಆಗುವುದಕ್ಕೆ ಅಧಿಕಾರವೇ ಇಲ್ಲ

ಪೆನಾಲ್ಟಿಯುಲ್ ಮೆಮೊರ್ಯಾಂಡಂ ಇಲ್ಲದೇ ಮಸೂದೆ ಮಂಡಿಸುವುದು ಸೂಕ್ತವಲ್ಲ, ಆದುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು ಇಲ್ಲದೇ ಇದ್ದರೆ ಇದು ಇನ್‌ವ್ಯಾಲಿಡ್ ಆಗುತ್ತದೆಂದು ಹೇಳ ಬಯಸುತ್ತೇನೆ.

SRI M.C. NANAIAH —I raise a point of order. Now, we want to know from the Hon'ble Minister there is any financial commitment If there is any financial commitment than the financial memorandum is necessary without which the bill cannot be introduced.

SRI Y, RAMAKRISHNA.—There is no financial commitment. Therefore; no financial memorandum has been attached.

ಅಧ್ಯಕ್ಷರು.—ಖರ್ಚು ಏನೂ ಇಲ್ಲ. ಪೇಮೆಂಟ್ ಇಲ್ಲ. ಖರ್ಚು ಇಲ್ಲ, ತೆಗೆದಕೊಂಡಿರುವುದನ್ನು ಅವರಿಗೆ ಕೊಡಬೇಡಿ ಎಂದು ಮಾಪಿ ಮಾಡುವುದು ಅಷ್ಟೇ.

ಶ್ರೀ ಜಿ. ಎಚ್. ಗಂಗಾಧರನ್ —ಇದರ ಪ್ರಕಾರವಾಗಿ ಕೆಲವರಿಗೆ ಪ್ರಮೋಷನ್ ಬರುತ್ತದೆ.

SRI Y. RAMAKRISHNA —This is only to over come the objections raised by the Accountant Genaral

ಅಧ್ಯಕ್ಷರು.—ಪ್ರಮೋಷನ್ ಕೊಟ್ಟೂ ಆಗಿದೆ, ಸಂಬಳ ಎಲ್ಲಾ ಕೊಟ್ಟು ಆಗಿದೆ, ಅದಕ್ಕೆ ನೀವು ಎಲ್ಲಾ ಓಟು ಮಾಡಲಾಗಿದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈಗಿರತಕ್ಕಂಥ ಕಾನೂನಿನಲ್ಲಿ ಹೀಗಿದೆ,...

> "Where consequent upon the review of promotions made under sub-section(1), it is found that an allottee, who, before the coming into force of Sections 3, 11 and 13 had been promoted to a higher class of grade of service found eligible for promotion to that higher class or grade of servic from a date prior to the date of actual promotion and subject to Section 9, is declared to have satiafactorily completed the period of officiation in the promotion post of office, an order shall be made directing that he shall be entitled initial pay on the date of actual promotion to the post or office as if he was holding the said post or office from the date on which he is found eligible for promotion and drawn the pay and allowances accordingly but he shall not be en titled to payment of any earrears for the period prior to the date of the actual promotion."

ಇದರಲ್ಲಿರತಕ್ಕ ಆ್ಯಕ್ಟ್‌ನಲ್ಲಿ ಮುಂದೆ ಒಬ್ಬ ಆಫೀಸರ್ ಆಗುವವರೆಗೆ ಆ್ಯಕ್ಟ್ಯುಯಲ್ ಡೇಟ್‌ಗಿಂತ ೬ ವರ್ಷ ಗಳ ಹಿಂದೆಯೇ ಪ್ರಮೋಷನ್ ಕೊಟ್ಟುಬಿಟ್ಟಿದ್ದೀರಿ. ನಿಮ್ಮ ಸೀನಿಯಾರಿಟಿ ಪ್ರಕಾರ ರೂಲ್ಸ್ ಪ್ರಕಾರ ಇವತ್ತಿನಿಂದ ಅವರಿಗೆ ಪ್ರಮೋಷನ್ ಕೊಡಬೇಕಾಗಿದೆ ಎಂದರೆ ಅವರಿಗೆ ಹಿಂದಿನಿಂದಲೇ ಕೊಟ್ಟು ಫಿಕ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇಲ್ಲಿಯವರೆಗೆ ತೆಗೆದುಕೊಂಡಿರತಕ್ಕವರು ಸಂಬಳವನ್ನು ವಾಪಸ್ ಕೊಡಬೇಕಾಗಿಲ್ಲವೇ. ಏತಕ್ಕೆ ಸ್ವಾಮಿ ಆದೇ ಒಬ್ಬ ಆಫೀಸರ್ ಒಂದು ಅಪೀಲನ್ನು ಹಾಕಿದಾಗ you say date on which he is found eligible for promotion and drawn the pay and allowances accordingly but he shall not be entitled to payment of any arrears...ಇವತಿನಿಂದ ಪ್ರಮೋಷನ್ ಕೊಡುತ್ತೇವೆಂದು ಹೇಳುತ್ತೀರಿ,

ಹಿಂದಿನ ಅರಿಯರ್ಸ್ ಕೇಳಬಾರದೆಂದು ಹೇಳುತ್ತೀರಿ ಆದರೆ ಅದೇ ತಪ್ಪು ಸರ್ಕಾರಿ ಆಜ್ಞೆಯಿಂದ ಯಾರಿಗೆ ಪ್ರಮೋಷನ್ ಸಿಗಬಾರದಿತ್ತೋ ಅವನು ಸಂಬಳವನ್ನೆಲ್ಲಾ ಡ್ರಾ ಮಾಡಿಕೊಂಡಿದ್ದಾನೆ, ಅವನ್ನು ವಾಪಸ್ಸು ಕೊಡುವ ಹಾಗಿಲ್ಲವೆಂದು ಹೇಳುತ್ತೀರಿ, ಆದರೆ ಯಾರಿಗೆ ಪ್ರಮೋಷನನ್ನು ಹಿಂದಿನಿಂದ ರಿ ಫಿಕ್ಸ್ ಮಾಡುತ್ತೀರೋ ಅವರಿಗೆ ಹಿಂದಿನ ಅರಿಯರ್ಸ್ ಕೊಡುವುದಿಲ್ಲವೆಂದು ಹೇಳುತ್ತೀದ್ದೀರಿ. ಏತಕ್ಕೆ ಸ್ವಾಮಿ ಈ ಅನ್ಯಾಯ, ಅನ್ಯಾಯದಾಗಿರತಕ್ಕದ್ದು ನಿಮ್ಮ ಸರ್ಕಾರಿ ತಪ್ಪು ಆಜ್ಞೆಯಿಂದಲೇ ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಆದುದರಿಂದ ಈ ರೀತಿಯಾಗಿ ಎಷ್ಟು ಜನ ಅಧಿಕಾರಿಗಳಿಗೆ ತೊಂದರೆಯಾಗಿದೆ. ಎಷ್ಟು ಜನರಿಗೆ ಇದರಿಂದ ಅನುಕೂಲವಾಗಿದೆ, ಎನ್ನುವ ಬಗ್ಗೆ ನಮ್ಮ ಮುಂದೆ ವಿವರವನ್ನು ತಾವು ಇಡಬೇಕಾಗಿತ್ತು. ಇದರ ಬಗ್ಗೆ ಬಹಳ ಜನ ಅಧಿಕಾರಿಗಳು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳವರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆಲ್ಲಾ ಅಪೀಲ್‌ಗಳನ್ನು ಹಾಕಿದ್ದಾರೆ. ಈಗಲೂ ಅಪೀಲ್‌ಗಳನ್ನು ಹಾಕಿದ್ದಾರೆ ಆ ದೃಷ್ಟಿಯಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸತಕ್ಕಂಥದ್ದು ಸೂಕ್ತವಾಗಿದೆ.

ಶ್ರೀ ಎಂ.ಸಿ. ನಾನಯ್ಯ.–ಮಾನ್ಯ ಅಧ್ಯಕ್ಷರೇ, ಸರ್ಕಾರಿ ಅಧಿಕಾರಿಗಳಿಗೆ ಕೊಟ್ಟಿರತಕ್ಕಂಥ ಹಣವನ್ನು ಹಿಂದಕ್ಕೆ ವಸೂಲಿ ಮಾಡಿಕೊಡುವುದು ಎಂದು ತಂದಿರತಕ್ಕ ಈ ಮಸೂದೆ ಈ ಕೆಲವು ಸರ್ಕಾರಿ ಅಧಿಕಾರಿಗಳು ತಲೆ ಬಾಗುತ್ತಾರೆ, ಸಂತೋಷ. ಆದರೆ ಮಾನ್ಯ ಶ್ರೀ ಗಂಗಾಧರಯ್ಯನವರು ಹೇಳಿರತಕ್ಕ ಒಂದು ವಿಷಯವನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಯಾವ ಕಾಲದಲ್ಲಿ ರಿ ಆರ್ಗನೈಜೇಷನ್ ಆದ ಮೇಲೆ ಹಲವಾರು ಭಾಗಗಳಿಂದ ಅಧಿಕಾರಿಗಳು ಬಂದಂಥ ಕಾಲಕ್ಕೆ, ಸೀನೇ ಮಹಡಿಯಲ್ಲಿ ಕೂತು ಯಾರಿಗೆ ಬೇಕೋ ಅವರಿಗೆ ಪ್ರಮೋಷನ್ ಕೊಟ್ಟರು. ಯಾರಿಗೆ ಪ್ರಮೋಷನ್ ಸಿಕ್ಕಲ್ಲಿಲ್ಲವೋ ಅವರು ಕೋರ್ಟಿನ ಮೆಟ್ಟಿಲ್ಲನ್ನು ಹತ್ತಿದರು. ಇಂಥಾ ಎಷ್ಟೋ ಪ್ರಶ್ನೆಗಳು ಸರ್ಕಾರದವರ ಗಮನಕ್ಕೆ ಬಂದಿದಾಗ್ಯೂ ಕೂಡ ಇಂಟರ್ ಸ್ಟೇಟ್ ಸೀನಿಯಾರಿಟಿ ಲೀಸ್ಟ್‌ನ್ನು ಇತ್ಯರ್ಥ ಮಾಡದೇ ಇದ್ದುದರಿಂದ ಈ ತರಹದ ಅನ್ಯಾಯ ಅವರಿಗಾಗಿದೆ. ತಮಗೆ ಉದಾಹರಣೆ ಕೊಡುವುದಾದರೆ, ಕೊಡಗಿಗೆ ಹಿಂದೆ ಒಂದು ರಾಜ್ಯವಾಗಿತ್ತು. ಅದು ಮಾನ್ಯ ಮಂತ್ರಿಯವರಿಗೂ ಗೊತ್ತಿದೆ ಎಂದು ಕಾಣುತ್ತದೆ. ಅದು ಜಿಲ್ಲೆಯಾಗಿರಲಿಲ್ಲ. ಒಂದು ರಾಜ್ಯವೇ ಆಗಿತ್ತು, ಕೊಡಗು ರಾಜ್ಯವನ್ನು ಕರ್ನಾಟಕಕ್ಕೆ ಸೇರಿಸಿದರು. ಆಗ ಕೊಡಗಿನಿಂದ ಬಂದಿರತಕ್ಕ ಉಪಾಧ್ಯಾಯರುಗಳು ಕರ್ನಾಟಕ ರಾಜ್ಯಕ್ಕೆ ಸೇರಿದಂಥ ಸಂದರ್ಭದಲ್ಲಿ ಅವರ ಸೀನಿಯಾರಿಟಿ ಲೀಸ್ಟನ್ನು ಸರ್ಕಾರ ಒಪ್ಪದಿದ್ದಾಗ ಆದಕ್ಕಾಗಿ ಹೋರಾಟ ಮಾಡಿ ನ್ಯಾಯಾಲಯಕ್ಕೆ ಹೋಗಿದ್ದು ಆಯಿತು. ಅಲ್ಲಿ ತೀರ್ಮಾನ ಕೊಟ್ಟರೂ ಸರ್ಕಾರ ಒಪ್ಪದಿದ್ದಾಗ ಉಚ್ಚ ನ್ಯಾಯಾಲಯಕ್ಕೆ ಹೋದಾಗ್ಯೂ ಕೂಡ ಸರ್ಕಾರ ಒಪ್ಪದಿದ್ದಾಗ ಸುಪ್ರೀಂಕೋರ್ಟಿಗೆ ಹೋಗಿ ಅವರು ನ್ಯಾಯವನ್ನು ದೊರಕಿಸಿಕೊಡಬೇಕಾದಂಥ ಪರಿಸ್ಥಿತಿ ಒದಗಿ ಬರಬೇಕೇ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.

೧೪ ವರ್ಷಗಳ ನಂತರ ಎಂದರೆ ೧೯೬೦ರಲ್ಲಿ ಸುಪ್ರೀಂ ಕೋರ್ಟು ತೀರ್ಪು ಕೊಟ್ಟಿತು. ಅವರ ಸೀನಿಯಾರಿಟಿಯನ್ನು ಫಿಕ್ಸ್ ಮಾಡಬೇಕೆಂದು ಆದೇಶ ಕೊಟ್ಟರೂ, ಪ್ರಾವಿಷನಲ್ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿ ಬಿಡ್ತಿ ಕೊಟ್ಟಿದ್ದರ ಮೇಲೆ ಪುನಃ ಸರ್ಕಾರ ಲಿಸ್ಟನ್ನು ಲಿಮೈಸ್ ಮಾಡಲಿಕ್ಕೆ ಹತ್ತಿದೆ. ನಾನು ಈಗ ಉಪಾಧ್ಯಾಯರ ಬಗ್ಗೆ ಹೇಳುತ್ತಿದ್ದೇನೆ. ಅವರು ಸುಪ್ರೀಂ ಕೋರ್ಟಿಗೆ ಹೋಗಿ ಆದೇಶ ತಂದು ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿ ಬಿಡ್ತಿ ಕೂಟ್ಟು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಪುನಃ ಲಿಸ್ಟನ್ನು ಉಲ್ಟ ಮಾಡಲಿಕ್ಕೆ ಹೊರಟಿದ್ದೀರಿ. ಶ್ರೀ ಭಾರ್ಗವಯವರು ವಿದ್ಯಾ ಮಂತ್ರಿಗಳಾಗಿದ್ದಾಗ ಅದನ್ನು ಜಾರಿಗೆ ತಂದರು. ಇವತ್ತಿನ ದಿವಸ ಅದನ್ನು ಉಲ್ಟ ಮಾಡಲಿಕ್ಕೆ ಹೊರಟು ಎಲ್ಲೆಲ್ಲಿ ಅಧಿಕಾರಿಗಳು ಬಿಡ್ತಿ ಹೊಂದವುದಕ್ಕೆ ಸಾಧ್ಯತೆ ಇತ್ತೋ ಅದನ್ನು ಇಲ್ಲ ಮಾಡಿದ್ದೀರಿ. ಇವತ್ತಿನವರೆಗೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ಸ್ (ಎಕ್ಸಾಮಿನೇಷನ್) (ರೀಸರ್ಚ್) ಈ ಹುದ್ದೆಗಳನ್ನು ಭರ್ತಿ ಮಾಡದೆ ಕಮೀಷನರ್ ಆಫ್ ಎಜುಕೇಷನ್ ಅವರೇ ಆ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದಾರೆ. ಇರತಕ್ಕ ಅಧಿಕಾರಿಗಳಿಗೆ ಬಡ್ತಿ ಕೊಡಲಿಕ್ಕೆ ತಯಾರಿಲ್ಲ. ಆ ಹುದ್ದೇಗಳು ಖಾಲಿಯಾದುದು ೨ ತಿಂಗಳ ಹಿಂದೆ. ಆಗಿನಿಂದಲೂ ಕಮೀಷರ್‌ರವರೇ ಆ ಎರಡು ಹುದ್ದೆಗಳ ಜವಾಬ್ದಾರಿಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ. ಪ್ರಾವಿಜನಲ್ ಸೀನಿಯಾರಿಟಿ ಲಿಸ್ಟ್ ಪ್ರಕಾರ ಬಡ್ತಿ ಕೂಟ್ಟರೆ ಏನಾಗುತ್ತದೆ ? ಕೇವಲ ೩–೪ ತಿಂಗಳನಲ್ಲಿ ನಿವೃತ್ತಿಯಾಗುತ್ತಿರತಕ್ಕ ಅಧಿಕಾರಿಗಳಿಗೆ ಬಡ್ತಿ ಸಿಗುವುದನ್ನು ತಪ್ಪಿಸುವುದಕ್ಕಾಗಿ ಕಮಿಷನರ್‌ರವರೇ ತಮ್ಮ ಕೈಯಲ್ಲಿ ಆ ಹುದ್ದೇಗಳನ್ನಿಟುಕೊಂಡಿದ್ದಾರೆ. ಈ ವಿದ್ಯಾ ಇಲಾಖೆ ಇವತ್ತಿನ ದಿವಸ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ಇದರಲ್ಲಿ ದೊಡ್ಡದಾದ ರೋಜ

ಕೀಯ ನಡೆಯುತ್ತಿದೆ. ಆದುದರಿಂದ ಇದಕ್ಕೆ ನಾವು ಮಾನ್ಯತೆ ಕೊಡುತ್ತಿಲ್ಲ. ಇವತ್ತಾದರೂ ಇದ್ದರೆ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಿದ್ದಿ ಸುಪ್ರೀಂ ಕೋರ್ಟ್ ಆದೇಶ ಕೊಟ್ಟರೆ ಅದನ್ನು ಏತಕ್ಕೆ ಜಾರಿಗೆ ತರುವುದಿಲ್ಲ ? ಬರುವ ವರ್ಷ ನೀವು ಇದೇ ರೀತಿಯ ಒಂದು ಸೂಚನೆಯನ್ನು ತಂದು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಈ ರೀತಿ ಆಯಿತು ಇದಕ್ಕೂ ಮಾನ್ಯತೆ ಕೊಡಿ ಎಂದರೆ ಹೇಗೆ ? ಆದುದರಿಂದ ಕಾನೂನು ಮಂತ್ರಿಗಳನ್ನು ಈ ಬಗ್ಗೆ ಒಂದು ಮಾತು ಕೇಳಬಯಸುತ್ತೇನೆ.

Do not for heaven's sake discriminate your own employees. Discrimination is going on, on regional and caste basis. Absolutely there is no rationale behind the fixation of seniority list. When Sri Kharge was the Minister for Primary Education, he went through the whole matter and finalised it. Then, within a period of two years the entire list has been revised again. This is where regionalism, communalism, casteism come to play. For heaven's sake, don't divide employees on caste and regional basis. Where is justice ? Find out records, if an employee is legitimately due to that promotion, straightaway give it to him. Waiting for files, sending files here and there, does not serve any purpose. Straightaway give promotions to the deserving candidates. This has been happening in so many departments and all these things are happening through the third floor of Vidhana Soudha. Therefore, I would very much request the Hon. Minister to look into personally. In respect of one issue when the people want a particular seniority list to be referred to the Law Department, they requested the departmental authority to refer the matter of the particular seniority list. They further said, if the Law Department come to the conclusion that we are not entitled for promotion, we will accept it. But, they have not sent it to the Law Department ; why ? For that purpose you have got Law Dapartment? When the objections were called for and when the aggrieved parties filed their representation before the Secretary concerned i.e., when they make fervent demand that this case may be referred to the Law Department to find out whether their representation is correct or not, the Secretary would not like to refer the same to the Law Department ; why ? This is where I doubt the bonafides of the Government. Now, this is a matter where I request the Law Minister to look into all records and get all recoads wherever they are and see justice is one to all the employees who are legitimately due to that. After serving 25 years, if an employee at the fag end of his service, does not get his due promotion which is due to him, naturally frustration will start. Many of the employees on account of frustration, they write to Government that they may be voluntarily retired because many of their juniors who have worked under them have become their seniors. If that is the case, what will be the morality of those officers : Can they work in that Department ? This is the one thing, which the Government should take seriously and see that frustration is not caused to employees. You have brought

this Bill because the Accountant General has raised objection. Here, who ever has drawn money, it would be difficult to recover it again. But, I said when you bring this amendment it goes into statute book and when the statute book lays down, where an employee legitimately gets his promotion from a particular day, he is not entitled for arrears of pay ; would it not amount to discrimination ? This is the point which you should ponder over and consider very seriously.

SRI Y. RAMAKRISHNA.—Virtually he has not acted in that position. If he has acted in that position, certainly he is entitled for it. ಯಾವಾಗ ಒಂದು ಕೋರ್ಟಿನಲ್ಲಿ ಕೇಸು ಹೊರಟು ಹೋಗುತ್ತದೋ ಆಗ ಮುಂದಿನ ಕೋರ್ಟಿಗೆ ಹೋಗುತ್ತಾರೆ. ಯಾರೇ ಒಬ್ಬ ಅಧಿಕಾರಿ ಒಂದು ಸ್ಥಾನದಲ್ಲಿ ಬಡ್ತಿ ಪಡೆದು ಕಾರ್ಯವನ್ನು ನಿರ್ವಹಿಸಿ ಇಂಟರ್ ಸ್ಟೇಟ್ ಸೀನಿಯಾರಿಟಿಯಲ್ಲಿ ಕೆಳಗೆ ಹೋಗುವುದೆಂದರೆ, he has virtually worked in that position. ಇವರಿಗೆ ಬಡ್ತಿ ಕೊಡುವುದೆಂದರೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ನಿಂದ ಕೊಡಬೇಕಾಗುತ್ತದೆ. He has drawn his salary after having worked virtually there.

SRI M.C. NANAIAH.—An employee, who according to the seniority list is not eligible for promotion, is being promoted i.e., who under law should not get promotion has been promoted. But, now at a later stage his seniority is reverted and you say, his salary should not be drawn because he has worked. But, I say, who should have been promoted and who is deprived of his promotion has not been promoted ; by whom it has happened ? He said, I am prepared to come and work in that position, but you have deprived him his chance. So, why should he lose his arrears of pay. That is the reason I say, when you have promoted an employee who is not eligible, and when such a employee is reverted, you protect his salary. But, an employee who should have been promoted long back and who on account of his fight after going to the Court gets his seniority back, after having got his promotion back you tell him, we are not prepared to pay your arrears of salary and other things. Why this type of discrimination among your own employees ? It should not be done ; it is a very very bad thing. I would rather forcefully request the Hon. Minister that the employees who should have been promoted to their respective posts long back, who have been denied their promotion and such of those employees who have been promoted now, as matter of right, they are entitled to get their salary and other things retrospectively. Why should not the Government pay ? The Government is bound to pay them. It may amount to a few lakhs, but you are doing justice to those employees. However, you may have reservations about our employees I say, when you treat them, you treat them alike. This type of having two weapons for two types of employees should not be there in any administrative setup. Therefore,

I would request the Hon. Law Minister to ponder over this issue deeply and see that these things are set right and justice is done to the employees in respect of whom discrimination is done on regional and communal basis.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ ಕ್ಷೇತ್ರ)—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯ ಬಗ್ಗೆ ಈಗಾಗಲೇ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವೆಂದು ನನಗನ್ನಿಸುತ್ತದೆ. ಈಗಾಗಲೇ ಹಲವಾರು ಮನವಿಗಳನ್ನು ಮುಖ್ಯ ಮಂತ್ರಿಗಳಿಗೆ ಮತ್ತಿತರ ಮಂತ್ರಿಗಳಿಗೆ ನೌಕರರು ಕೊಟ್ಟಿದ್ದಾರೆ. ಈ ತಿದ್ದುಪಡಿಯಿಂದ ಯಾವ ರೀತಿ ಪ್ರಮೋಷನ್ ವಿಚಾರದಲ್ಲಿ ತೊಂದರೆಯಾಗ ತ್ತದೆಂಬುದು ಆ ಮನವಿಗಳಲ್ಲಿ ಪ್ರಸ್ತಾಪವಾಗಿದೆ. ರಾಮಕೃಷ್ಣ ಆವರಿಗೆ ಇದು ಬಂದಿದ್ದರೆ ಅವರು ಇದನ್ನು ತರುತ್ತಿರಲಿಲ್ಲವೆಂದು ಕಾಣುತ್ತದೆ. ಡಾ. ತಿಮ್ಮೇಗೌಡರು ಹೇಳಿದ ಹಾಗೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಒಳ್ಳೆಯದು. ಈ ತಿದ್ದುಪಡಿಯಿಂದ ಸಿಬ್ಬಂದಿಯವರ ಸೇವಾ ಅವಧಿಯ ಮೇಲೆ ಅಡ್‌ವರ್ಸ್ ಎಫೆಕ್ಟ್ ಆಗುತ್ತದೆ.

೫–೩೦ ಪಿ.ಎಂ.

ಸ್ವಾಮಿ, ಸೆಕ್ಷನ್ ೪ನ್ನು ಅಮೆಂಡ್ ಮಾಡುವುದರಿಂದ ದುಡ್ಡನ್ನು ರೀಫಂಡ್ ಮಾಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಆದರೆ ತಾವು ಇದನ್ನು ಪಾಸ್ ಮಾಡಿದರು ಸುಮಾರು ೫ ರಿಂದ ೧೦ ಇಂಕ್ರಿಮೆಂಟ್ಸ್ ಹೋಗುತ್ತದೆ. ಇದರಿಂದ ಸುಮಾರು ೫೦ ಪರ್ಸೆಂಟ್ ಆಫೀಸಿಯಲ್ಸ್‌ಗೆ ಹಾರ್ಡ್‌ಶಿಪ್ ಆಗುತ್ತದೆ. ಪುನಃ ಇದು ಕೋರ್ಟ್‌ನಲ್ಲಿ ಚಾಲೆಂಜ್ ಆಗುತ್ತದೆ. ಈ ಬಗ್ಗೆ ೧೯೭೩ ಹಾಗೂ ೭೬ ರಲ್ಲಿ ಬಂದ ಬಿಲ್‌ಗಳೂ ಕೋರ್ಟಿನಲ್ಲಿ ಚಾಲೆಂಜ್ ಆಗಿವೆ. ಹಾಗೂ ಆ ಬಗ್ಗೆ ಕೋರ್ಟಿನ ತೀರ್ಪೂ ಸಹಾ ಬಂದಿರುತ್ತದೆಂಬುದು ತಮಗೆ ಗೊತ್ತಿದೆ. ೧೯೭೬ ರಲ್ಲಿ ತಾವು ಕರ್ನಾಟಕ ಸರ್ವೀಸ್ ಎಕ್ಸಂಪ್ಷನ್ ಆಕ್ಟ್ ಪಾಸ್ ಮಾಡಿದಿರಿ. ೧೯೭೩ ರಲ್ಲೂ ಆಕ್ಟ್ ಪಾಸ್ ಮಾಡಿದಿರಿ. ಇದರ ಎಫೆಕ್ಟ್ ಏನಾಯಿತು? ೧–೧೧–೧೯೫೬ ರಿಂದ ೯–೧–೧೯೭೬ ರವರೆಗೆ ಪ್ರಮೋಷನ್ ರಿವ್ಯೂ ಮಾಡಿದಿರಿ. ೧೯೭೩ ರ ಹಾಗೂ ೧೯೭೬ ರ ಆಕ್ಟ್ ಆಕ್ಟ್‌ನ ಹಿನ್ನೆಲೆಯಲ್ಲಿ ಪ್ರಮೋಷನ್ ರಿವ್ಯೂ ಮಾಡಿದಿರಿ. ೧–೧೧–೧೯೫೬ ರಿಂದ ೯–೧–೧೯೭೬ ರವರೆಗೆ ತಾವು ಸೀನಿಯಾರಿಟಿ ರೆವ್ಯೂ ಮಾಡಿದಾಗ ಸಾವಿರಾರು ಜನರಿಗೆ ತೊಂದರೆಯಾಯಿತು. ಆಗ ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರು. ಇಲಾಖಾ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಏನು ಸೀನಿಯಾರಿಟಿ ಕೊಡಬೇಕಾಗಿತ್ತೋ ಅವರು ಡಿಪ್ರೈವ್ ಆದರು. ಅವರಿಗೆ ಗ್ರೆಡೇಷನ್ ಲಿಸ್ಟ್‌ನಲ್ಲಿ ಸೀನಿಯಾರಿಟಿ ಕೊಡಲಿಲ್ಲ. ಅವರು ಕೋರ್ಟಿಗೆ ಹೋಗಿ ಆರ್ಡರ್ ತೆಗೆದುಕೊಂಡು ಬಂದರು. ೧೯೭೬ ರಲ್ಲಿ ಈ ವಿಷಯದಲ್ಲಿ ಇಲ್ಲಿ ಚರ್ಚೆಯಾಗಿದೆ. ಸರ್ಕಾರ ಒಂದು ಭರವಸೆಯನ್ನೂ ಕೊಟ್ಟಿತ್ತು. The State Government assured on the floor of the House that no reduction in the pay will be made to the officials whose dates of eligibility for promotions are later than the actual date of promotion consequent on the review of promotions in the light of the provisions of the Karnataka Civil Services Examinations Act, 197 . ಆದರೆ ಇವತ್ತು ಇದನ್ನು ಪಾಸ್ ಮಾಡಿದರೆ ೪೦೦ ರೂಪಾಯಿಯಿಂದ ೫೦೦ ರೂಪಾಯಿಯವರೆಗೆ ಪೇ ಕಡಿಮೆಯಾಗುತ್ತದೆ. ಅಕೌಂಟ್ಸ್ ಸೂಪರಿಂಟೆಂಡೆಂಟ್ಸ್ ೪೦೦ ರಿಂದ ೫೦೦ ರೂಪಾಯಿವರೆಗೆ ರೆಡ್ಯೂಸ್ ಆಗಿ ಮತ್ತು ೫ ರಿಂದ ೧೦ ಇಂಕ್ರಿಮೆಂಟ್ಸ್ ಕಡಿಮೆಯಾಗುತ್ತದೆ. ಇದು ಸರ್ವೀಸ್ ಮ್ಯಾಟರ್‌ಗೆ ಸಂಬಂಧಪಟ್ಟಿದರಿಂದ ಇದನ್ನು ವಾಪಸ್ ತೆಗೆದುಕೊಳ್ಳಿ ಇಲ್ಲದಿದ್ದರೆ ಸಬ್ ಕಮಿಟಿಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಇಲ್ಲಿ ಲೋಪದೋಷ ಆಗಿಲ್ಲವೆಂದು ನಾನು ಹೇಳುವುದಿಲ್ಲ ಲೋಪದೋಷ ಆಗಿವೆ. ಆದೂ ಉದ್ದೇಶಪೂರ್ವಕವಾ ಲೋಪದೋಷ ಆಗಿದೆ ಎಂದು ನಾನಂ ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಆ ಸಂದರ್ಭದಲ್ಲಿ ಮತ್ತು ಆಗ ಇರತಕ್ಕ ಅಧಿಕಾರಿಗಳು ಮನಸ್ಸಿನಲ್ಲಿ ಏನನ್ನು ಇಟ್ಟುಕೊಂಡು ಯಾರ ಸೀನಿಯಾರಿಟಿಯನ್ನು ಯಾರಿಗೆ ಕೇಳಿದ್ದಾರೋ ಎನ್ನುವುದು ಅವರಿಗೆ ಬಿಟ್ಟ ವಿಚಾರ. ಅವರು ಆ ಲಿಸ್ಟನ್ನು ಮಾಡಿದ್ದಾರೆ. Though it is an evil, it is a

necessary evil which we have to bear and we are expected to bear it. ಆದುದರಿಂದ ತಂದಿರತಕ್ಕ ಅಮೆಂಡ್‌ಮೆಂಟ್ ಏನೆಂದರೆ, ನಾಳೆ ದಿವಸ ಆಕೌಂಟೆಂಟ್ ಜನರಲ್ ಅಬ್ಜಕ್ಷನ್ ಹಾಕಬಾರದು ಎಂದು. ಒಂದು ವೇಳೆ ಒಂದೆರಡು ಅಂತಹವು ಇರಬಹುದು. ಮುಂದೆ ಹಣಕಾಸಿನ ಇಂಪ್ಲಿಕೇಷನ್ಸ್ ಏನೂ ಬರುವುದಿಲ್ಲ. Just to override that objection, we have brought this amendment. ಮಾನ್ಯ ನಾನಯ್ಯನವರು ಉಪಾಧ್ಯಾಯರ ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಸುಪ್ರೀಮ್ ಕೋರ್ಟ್‌ನಿಂದ ಆದೇಶ ಬಂದಮೇಲೂ ಅದನ್ನು ಜಾರಿಗೆ ತರಲಿಲ್ಲ ಎಂದು ಹೇಳಿದರು. The Government will certainly look into such matters. ಸುಪ್ರೀಮ್ ಕೋರ್ಟ್ ಆದೇಶ ಬಂದಮೇಲಂತೂ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಆದುದರಿಂದ ರೆಟ್ರಾಸ್ಪೆಕ್ಟೀವ್ ಆಗಿ ಮಾಡುವುದಕ್ಕಾಗಂವುದಿಲ್ಲ, ಅದು ಪ್ರಾಸ್ಪೆಕ್ಟೀವಾಗಿ ಬರಬೇಕಾಗುತ್ತದೆ. ದಯಮಾಡಿ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. Though it is an evil, it is a necessary evil. It is not wantonly done. We have to bear in mind that it was done in the bona fide interest.

MR. SPEAKER.—I will now put the consideration motion to the vote of the House. The question is:

"That the Karnataka State Civil Services (Regulation of Promotion, Pay and Pension) (Amendment) Bill, 1981 be taken into consideration."

The Motion was adopted.

CLAUSES 2 & 3

MR. SPEAKER.—The question is:

"That Clauses 2 and 3 do stand part of the Bill."

The Motion was adopted.

Clauses 2 and 3 were added to the Bill.

CLAUSE I Etc.

MR. SPEAKER.—The question is:

"That Clause 1, the Long Title, the Preamble and the Enacting Formula do stand part of the Bill."

The Motion was adopted.

Clause 1, the Long Title, the Preamble and the Enacting formula were added to the Bill.

Motion to Pass

SRI Y. RAMKRISHNA —Sir, I beg to move:

"That the Karnataka State Civil Services (Regulation of Promotion Pay and Pension) (Amendment) Bill, 1981 be passed."

The Motion was adopted and the Bill was passed.